# ಹೊರೆ ಕಾಣಿಕೆಯಲ್ಲಿ ಅಕ್ಕಿ ಮುಡಿ

ದ.ಕ. ಜಿಲ್ಲೆಯ ದೇವಸ್ಥಾನ, ದೈವಸ್ಥಾನ, ನಾಗನಗುಡಿ, ಮಠ–ಮಂದಿರಗಳಲ್ಲಿ ಜಾತ್ರೋತ್ಸವ, ಬ್ರಹ್ಮಕಲಶ, ನಾಗಮಂಡಲ ಮೊದಲಾದ ಧಾರ್ಮಿಕ ಕಾರ್ಯಕ್ರಮಗಳ ಆಚರಣೆ ನಡೆಯುತ್ತಿರುತ್ತದೆ. ಈ ವಿಶೇಷ ಸಂದರ್ಭಗಳಲ್ಲಿ ಆಗಮಿಸಿದ ಭಕ್ತಾದಿಗಳಿಗೆ ಉಣಬಡಿಸುವುದು ಅನಾದಿ ಕಾಲದಿಂದಲೂ ನಡೆದು ಬಂದ ಸಂಪ್ರದಾಯ. ಅದಕ್ಕೆ ಸಂಬಂಧಿಸಿದಂತೆ ಊರ, ಪರ ಊರ ಭಕ್ತರು ಅಕ್ಕಿ– ಭತ್ತ, ದವಸ–ಧಾನ್ಯ, ಸೀಯಾಳ, ತೆಂಗಿನಕಾಯಿ, ಅಡಿಕೆ, ಸಿಂಗಾರ, ಹೂ, ತರಕಾರಿ, ಎಣ್ಣೆ, ತುಪ್ಪ ಇತ್ಯಾದಿ ಅವಶ್ಯಕ ದಿನ ಬಳಕೆಯ ವಸ್ತುಗಳನ್ನು ಮಂಗಳವಾದ್ಯದೊಂದಿಗೆ ಮೆರವಣಿಗೆ ಮೂಲಕ ಹೊರೆ ಕಾಣಿಕೆ ತಂದೊಪ್ಪಿಸುವುದು ವಾಡಿಕೆ. ಈ ಚಿತ್ರದಲ್ಲಿ ಬಂದ ಅಕ್ಕಿಮುಡಿಯನ್ನು ಒಪ್ಪಿಸಿದವರ ಹೆಸರಿನೊಂದಿಗೆ ಅಲಂಕಾರಿಕವಾಗಿ ಪೇರಿಸಿಟ್ಟದ್ದನ್ನು ಕಾಣಬಹುದು. ಈ ಸುಂದರ ದೃಶ್ಯ ಕಂಡು ಬಂದದ್ದು ದ.ಕ. ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಅರಳ ಶ್ರೀ ಗರುಡ ಮಹಾಕಾಳಿ ದೇವಸ್ಥಾನದ ಅಷ್ಟಬಂಧ ಬ್ರಹ್ಮಕಲಶ ಹಾಗೂ ಜಾತ್ರೋತ್ಸವದ ಸಂದರ್ಭದಲ್ಲಿ.

**–ಪಿ. ಪಾರ್ವತಿ ಐ. ಭಟ್, ಪುಂಡಿಕಾಯ್**





# ಅಡಿಕೆ ಬೆಟ್ಟದಲ್ಲಿ ಗಣೇಶ

ಬೈಲಹೊಂಗಲದ ಕಲ್ಮಠ ಗಲ್ಲಿಯ ನಿವಾಸಿ ಶಂಕರ ಮಲ್ಲಮ್ಮನವರ ಅವರು ಅಡಿಕೆ ಬೆಟ್ಟದಲ್ಲಿ ಶ್ರೀಗಣೇಶನನ್ನು ಕಲಾತ್ಮಕವಾಗಿ ಕೆತ್ತಿದ್ದಾರೆ. ಇಂತಹ ಕಲಾವಿದರು ಅಪರೂಪವೇ ಸರಿ.

**–ರಮೇಶ ಜ. ಬೊಂಗಾಳೆ, ಬೈಲಹೊಂಗಲ**

# ಹೀಗೊಂದು ಓದು ಮಂಚ...

ವಿದ್ಯಾರ್ಥಿ ಸಮೂಹದಲ್ಲಿ ಸಾಹಿತ್ಯ ಓದನ್ನು ಹೆಚ್ಚಿಸಲು ‘ಓದು ಮಂಚ’ ವೆಂಬ ಜಾಗವನ್ನು ತೀರ್ಥಹಳ್ಳಿಯ ತುಂಗಾ ಮಹಾವಿದ್ಯಾಲಯದಲ್ಲಿ ಗ್ರಂಥಾಲಯದೊಳಗೆ ನಿರ್ಮಿಸಿದ್ದಾರೆ. ಈ ಕಾಲೇಜಿನ ‘ಓದು ಮಂಚ’ ಪಕ್ಕದಲ್ಲಿ ಶಿವಮೊಗ್ಗ ಜಿಲ್ಲೆಯ ಇಬ್ಬರು ಜ್ಞಾನಪೀಠ ಪುರಸ್ಕೃತ ಸಾಹಿತಿಗಳ ಪುಸ್ತಕಗಳನ್ನು ಪ್ರತ್ಯೇಕವಾಗಿ ಜೋಡಿಸಲಾಗಿದೆ. ಜೊತೆಗೆ ಕನ್ನಡದ ಎಲ್ಲಾ ಜ್ಞಾನಪೀಠ ಪುರಸ್ಕೃತ ಸಾಹಿತಿಗಳ ಪುಸ್ತಕವೂ ಓದುಗ ವಿದ್ಯಾರ್ಥಿಗಳಿಗೆ ಸಿಗುವಂತಹ ವ್ಯವಸ್ಥೆ ಇಲ್ಲಿದೆ.

ಪುಸ್ತಕ ಓದಿದ ಆ ಜಾಗದಲ್ಲಿ ನಂತರ ಅನಿಸಿಕೆ ಬರೆಯುವ ವ್ಯವಸ್ಥೆ ವಿದ್ಯಾರ್ಥಿಗಳಿಗೆ ಮಾಡಿದ್ದಾರೆ. ಇಂತಹದೊಂದು ಚಿಂತನೆಯನ್ನು ರಾಜ್ಯದ ಇತರ ಕಾಲೇಜುಗಳ ಗ್ರಂಥಾಲಯದಲ್ಲಿ ಮಾಡಿದರೆ ನಮ್ಮ ಸಾಹಿತ್ಯದ ಓದು ವಿದ್ಯಾರ್ಥಿ ಸಮೂಹವನ್ನು ಸೆಳೆಯಬಹುದಲ್ಲವೇ?

**–ರಾಂಚಂದ್ರ ಕೊಪ್ಪಲು, ತೀರ್ಥಹಳ್ಳಿ**

